# ನವರಾತ್ರಿ ಸಂಭ್ರಮಕ್ಕೆ ಫ್ಲೋರಲ್ ಸಲ್ವಾರ್



**ನವರಾತ್ರಿ ಹಬ್ಬದಂದು ಸಾಂಪ್ರದಾಯಿಕ ಉಡುಗೆಗಳಿಗೇ ಆದ್ಯತೆಯಾಗಿರುವುದರಿಂದ ಪರಂಪರೆಗೆ ಧಕ್ಕೆಯಾಗದಂತೆ ಆಧುನಿಕ ವಿನ್ಯಾಸದ ಉಡುಪುಗಳು ಟ್ರೆಂಡ್ ಸೃಷ್ಟಿಸಿವೆ. ಫ್ಲೋರಲ್ ಸಲ್ವಾರ್‌ಗಳು ಫೆಸ್ಟಿವ್ ಸರಣಿ ಉಡುಪುಗಳಲ್ಲಿ ಲಭ್ಯವಿದ್ದು ಹಬ್ಬದ ಸಂಭ್ರಮಕ್ಕೆ ಸರಿಯಾಗಿ ಸಾಥ್ ನೀಡುತ್ತವೆ.**

**■ ಯು. ಅನಂತ್**

ಇಡೀ ಜಗತ್ತು ಸೋಂಕೆಂಬ ಒಂದೇ ಕಾರಣಕ್ಕೆ ತಲ್ಲಣಗೊಂಡಿದ್ದರೂ ಫ್ಯಾಷನ್ ಪ್ರಿಯರು ತಾವು ಇಚ್ಛಿಸಿದ ಉಡುಪು ಒಡವೆಗಳನ್ನು ಧರಿಸಿ ಫ್ಯಾಷನಬಲ್ ಆಗಿ ಕಾಣಲು ಹಾತೊರೆಯುತ್ತಿದ್ದಾರೆ. ಹಬ್ಬ ಹರಿದಿನ ಬಂದರಂತೂ ಹೊಸ ವಿನ್ಯಾಸದ, ಗಾಢ, ತಿಳಿ ವರ್ಣಗಳ ವೈವಿಧ್ಯಮಯ ಉಡುಪುಗಳನ್ನು ತೊಡಲು ಮನಸ್ಸು ತುಡಿಯುತ್ತದೆ. ಇದೀಗ ನವರಾತ್ರಿ ಸಂಭ್ರಮ. ನವರಾತ್ರಿಯ ಒಂಬತ್ತೂ ದಿನಗಳಲ್ಲಿ ಹೊಸ ಉಡುಗೆ ಧರಿಸಲು ಸಕಾಲ. ಇದಕ್ಕಾಗಿ ಸದ್ಯ ಫ್ಯಾಷನ್‌ಪ್ರಿಯರು ಎಥ್ನಿಕ್ ಉಡುಪು, ಟ್ರೆಂಡಿ ಸಲ್ವಾರ್, ಟ್ರೆಡಿಷನಲ್ ಉಡುಪುಗಳನ್ನು ಕೊಳ್ಳಲು ದಾಪುಗಾಲು ಹಾಕುತ್ತಿದ್ದಾರೆ.

ಹಬ್ಬದ ದಿನ ಸಾಮಾನ್ಯವಾಗಿ ಸಾಂಪ್ರದಾಯಿಕ ಉಡುಪುಗಳಿಗೇ ಆದ್ಯತೆ. ಇಂದು ಪರಂಪರೆಗೆ ಕೊಂಚವೂ ಧಕ್ಕೆಯಾಗದಂತೆ ಆಧುನಿಕ ಉಡುಪುಗಳು ಟ್ರೆಂಡ್ ಎನಿಸಿವೆ. ಫ್ಯಾಷನ್ ಜಗತ್ತಿಗೆ ಸೂಕ್ತವಾದ ನವರಾತ್ರಿ ಉಡುಪುಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಹಲವು ತರದ ಹೊಸತನದಿಂದ ಕೂಡಿವೆ. ಹೊಸ ಉಡುಪುಗಳು ಹಬ್ಬದ ಸಂಭ್ರಮವನ್ನು ಇಮ್ಮಡಿಸಲೆಂದೇ ರೂಪುಗೊಂಡವುಗಳು.

ಯುವತಿಯರು ಸಾಮಾನ್ಯವಾಗಿ ಜೀನ್ಸ್ ಪ್ಯಾಂಟ್ ಇಷ್ಟಪಟ್ಟರೂ ಹಬ್ಬದ ನಿಟ್ಟಿನಲ್ಲಿ ಪ್ಯಾಂಟ್ ಮೇಲೆ ಎಥ್ನಿಕ್ ಟಾಪ್ ಧರಿಸಿ ನವರಾತ್ರಿ ಸಂಭ್ರಮಕ್ಕೆ ಟ್ವಿಸ್ಟ್ ನೀಡಲು ಸಜ್ಜಾಗಿದ್ದಾರೆ. ಫ್ಲೋರಲ್ ಹ್ಯಾಂಡ್ ಪ್ರಿಂಟೆಂಡ್ ಟಾಪ್, ಮಲ್ಟಿ ಕಲರ್ ಎಂಬ್ರಾಯಿಡರಿ ವರ್ಕ್ ಇರುವ ಉಡುಗೆಗಳು ಸಖತ್ ಲುಕ್ ಕೊಡುತ್ತವೆ. ನವರಾತ್ರಿ ಆಚರಣೆಗಾಗಿಯೇ ಸಿದ್ಧ ಉಡುಪು ಮಳಿಗೆಗಳು 'ಗೋ ಟ್ರೆಡಿಷನಲ್', ಮಿಕ್ಸ್ ಅಂಡ್ ಮ್ಯಾಚ್, ಎಥ್ನಿಕ್ ಕ್ರಾಪ್ ಟಾಪ್, ಫೆಸ್ಟಿವ್ ಡ್ರೆಸಿಂಗ್ ಮುಂತಾದ ಹೆಸರಿನಲ್ಲಿ ಸೀರೆ, ಸಲ್ವಾರ್, ಟಾಪ್, ಸ್ಕರ್ಟ್‌ಗಳನ್ನು ಹೊರತಂದಿವೆ. ಟ್ರೆಡಿಷನಲ್ ಮಾದರಿಯ ಉಡುಪು ಮಕ್ಕಳಿಂದ ಹಿಡಿದು ಹಿರಿಯರವರೆಗೂ ಸಾಂಪ್ರದಾಯಿಕ ಲುಕ್ ಕೊಡುತ್ತವೆ. ಇದರಲ್ಲಿ ಕೆಂಪು, ಹಳದಿ, ಹಸಿರು, ನೀಲಿ ಬಣ್ಣಗಳ ಬಾಂದನಿ ಸೀರೆ ಲಭ್ಯ. ನವರಂಗ್ ಸೀರೆಗಳೂ ಈ ಹಬ್ಬದ ಸಂಭ್ರಮಕ್ಕಾಗಿಯೇ ರೂಪಿತವಾದವು. ಫ್ಯಾಷನ್‌ಪ್ರಿಯ ಕನ್ಯೆಯರು ಫ್ಲೋರಲ್ ಸಲ್ವಾರ್ ಅನ್ನೇ ಬಯಸುತ್ತಿದ್ದು, ಕಡು ಕೆಂಪು, ಅಚ್ಚ ಬಿಳಿ ಬಣ್ಣದ ಸಲ್ವಾರ್‌ಗಳನ್ನು ಕೊಳ್ಳುವವರ ಸಂಖ್ಯೆ ಹೆಚ್ಚಿದೆ.

ಎಥ್ನಿಕ್ ಕ್ರಾಪ್ ಟಾಪ್ ಅನ್ನು ಮಿಕ್ಸ್ ಅಂಡ್ ಮ್ಯಾಚ್ ಪರಿಕಲ್ಪನೆಯಲ್ಲಿ ಹೊರತರಲಾಗಿದ್ದು, ಇದರಲ್ಲಿ ಗಾಗ್ರಾ, ಕುರ್ತಿ ಹಾಗೂ ಹಾಫ್ ಸಾರಿ ಲಭ್ಯ. ಪುಟ್ಟ ಹುಡುಗಿಯರು ಎರಡು ಜಡೆ ಹಾಕಿ ಜುಮ್ಕಾ ಧರಿಸಿ ಅಡ್ಡಾಡುವುದನ್ನು ನೋಡುವುದೇ ಹಬ್ಬ, ಇದೇ ಮಾದರಿಯ ಉಡುಗೆ 'ಫೆಸ್ಟಿವ್ ಸರಣಿ'ಯಲ್ಲೂ ಸಿಗುತ್ತದೆ.

'ಉಳಿದ ಸಂದರ್ಭಗಳಲ್ಲಿ ಫ್ಯಾಷನ್,



